47

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಪಿ.ಸುಜಾಕುಶಾಲಪ್ಪರವರ ನಿಯಮ 330ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:47ಕ್ಕೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:** ರಾಜ್ಯ ಹಾಗೂ ಕೊಡಗು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಅರಣ್ಯ ಭೂಮಿಯನ್ನು 99 ವರ್ಷಗಳಿಗೆ ಗುತ್ತಿಗೆಗೆ ಪಡೆದು ರಬ್ಬರ್ ಬೆಳೆಯುತ್ತಿರುವ ವ್ಯಕ್ತಿಗಳ ಮತ್ತು ಕಂಪೆನಿಗಳಿಂದ ಸರ್ಕಾರಕ್ಕೆ ಅಂದಾಜು 2000 ಕೋಟಿ ಗುತ್ತಿಗೆ ಹಣ ಪಾವತಿಸದೆ ಬಾಕಿ ಉಳಿಸಿಕೊಂಡ ಪ್ರಸ್ತಾವನೆ ಸಂಬಂಧಿಸಿದಂತೆ ಕೇವಲ ಕೊಡಗು ಜಿಲ್ಲೆಯೊಂದರಲ್ಲಿಯೇ 1600 ಕೋಟಿ ಗುತ್ತಿಗೆ ಹಣ ಇಲಾಖೆಗೆ ಪಾವತಿಸಲು ಬಾಕಿ ಇರುತ್ತದೆ. ಮತ್ತು ಗುತ್ತಿಗೆ ಪಡೆದುಕೊಂಡು ಬೆಳೆ ಬೆಳೆಯುತ್ತಿರುವ ಅರಣ್ಯ ಭೂಮಿಗಳ ಪಹಣಿ ಪ್ರಸ್ತುತ ಗುತ್ತಿಗೆದಾರರ ಹೆಸರಿಗೆ ವರ್ಗಾವಣೆಯಾಗಿರುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ ಗುತ್ತಿಗೆ ಪಡೆದುಕೊಂಡಿರುವ ಗುತ್ತಿಗೆದಾರರು ಅಥವಾ ವ್ಯಕ್ತಿಗಳು ಹಾಗೂ ಅರಣ್ಯ ಭೂಮಿಯನ್ನು ಗುತ್ತಿಗೆದಾರರ ಹೆಸರಿಗೆ ವರ್ಗಾಯಿಸಲು ಕೈಜೋಡಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮಾನ್ಯ ಅಪಜೀ ಮತ್ತು ಪರಿಸರ ಸಚಿವರೊಂದಿಗೆ ಪ್ರಸ್ತಾಪಿಸಲು ಅನುಮತಿ ನೀಡುವಂತೆ ಕೋರುತ್ತೇನೆ.

**ಉತ್ತರ:** ಕೊಡಗು ವೃತ್ತ ವ್ಯಾಪ್ತಿಯಲ್ಲಿ 04 ರಬ್ಬರ್ ಕಂಪೆನಿಗಳಿಗೆ (ಮರ್ಕರ, ನೀಲಂಬೂರು, ಥಾಮ್ಸನ್, ಪೋರ್ಟ್ ಲ್ಯಾಂಡ್) ರಬ್ಬರ್ ಬೆಳೆಯಲು ಕಂಪೆನಿಗಳಿಗೆ ಕೃಷಿ ಮಾಡಲು ಅರಣ್ಯ ಪ್ರದೇಶವನ್ನು ಗುತ್ತಿಗೆಯನ್ನು ನೀಡಲಾಗಿದೆ.

**ಗುತ್ತಿಗೆ ವಿವರ**

| ಕ್ರ. ಸಂ. | ಕಂಪೆನಿಗಳ ವಿವರ | ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|
| 1. | ಮರ್ಕರ ರಬ್ಬರ್ ಕಂಪೆನಿ | 1074.00 |
| 2. | ನೀಲಂಬೂರು ರಬ್ಬರ್ ಕಂಪೆನಿ | 713.03 |
| 3. | ಥಾಮ್ ಸನ್ ರಬ್ಬರ್ ಕಂಪೆನಿ | 625.00 |
| 4 | ಪೋರ್ಟ್ ಲ್ಯಾಂಡ್ ರಬ್ಬರ್ ಕಂಪೆನಿ | 1288.75 |

ಮೇಲಿನ ಕಂಪನಿಗಳು ಗುತ್ತಿಗೆ ನವೀಕರಣ ಹಾಗೂ ಗುತ್ತಿಗೆ ಮೊತ್ತದ ಮೇಲೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ವಿವರಗಳು ಈ ಕೆಳಕಂಡಂತಿದೆ.

1. ಕೊಡಗು ಜಿಲ್ಲೆಯಲ್ಲಿ ರಬ್ಬರ್ ಮತ್ತು ಕಾಫಿ/ಟೀ ಬೆಳೆ ಬೆಳೆಯಲು ವಿವಿಧ ಕಂಪನಿಗಳಿಗೆ ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಕೌನ್ಸಿಲ್ ರವರು ದಿನಾಂಕ 1910 ರಿಂದ 1929ರ ಅವಧಿಯಲ್ಲಿ 999 ವರ್ಷಗಳ ಅವಧಿಗೆ ಗೇಣಿಗೆ ನೀಡಲಾಗಿದೆ.
2. ಸರ್ಕಾರಿ ಆದೇಶ **ಸಂಖ್ಯೆ:192.ಎಫ್‌ಎಲ್‌ಎಲ್/2008, ಬೆಂಗಳೂರು ದಿನಾಂಕ: 19.12.2012ರಲ್ಲಿ** ಗುತ್ತಿಗೆ ಮೂಲ ಅವಧಿಯನ್ನು 999 ವರ್ಷಗಳಿಂದ 99 ವರ್ಷಗಳಿಗೆ ಮಿತಿಗೊಳಿಸಿ ಆದೇಶ ಮಾಡಲಾಗಿರುತ್ತದೆ.
3. ಗುತ್ತಿಗೆ ಅವಧಿಯು 2015ನೇ ಸಾಲಿಗೆ ಮುಕ್ತಾಯ ಗೊಂಡಿರುವುದರಿಂದ ಗುತ್ತಿಗೆ ನೀಡಿರುವ ಜಾಗವನ್ನು ಇಲಾಖಾ ವಶಕ್ಕೆ ಪಡೆಯಲು ಸಂಬಂಧಪಟ್ಟ ಕಂಪನಿಯವರಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರ ಪತ್ರ ಸಂಖ್ಯೆ:ಎಪಿಸಿಸಿಎಫ್(ಜಾಗೃತ)/ಬ್ರಿಟಿಷ್ ಲೀಸ್/ ಸಿಆರ್-52/2015-16, ದಿನಾಂಕ:21.08.2015ರಂತೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.
4. ಕಂಪನಿಯವರಿಗೆ ಗುತ್ತಿಗೆ ಮೊತ್ತವನ್ನು ಪಾವತಿಸುವ ಕುರಿತು ಕೊಡಗು ವೃತ್ತ ರವರ ಪತ್ರ ಸಂಖ್ಯೆ: ಭೂಮಿ/ಬ್ರಿಟಿಸ್ ಲೀಸ್/ಸಿಆರ್-17/2015-16 ದಿನಾಂಕ:09.11.2015ರಂತೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಕ್ರ.ಸಂ.2 ರಿಂದ 4ರ ವರೆಗೆ ನಮೂದಿಸಲಾಗಿರುವ ಅಂಶಗಳ ವಿರುದ್ಧ ಸಂಬಂಧಪಟ್ಟ ಕಂಪನಿಯವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿರುತ್ತಾರೆ.

| ಕ್ರ. ಸಂ. | ಕಂಪನಿಯ ಹೆಸರು | ರಿಟ್ ಅರ್ಜಿಗಳ ವಿವರ |
|---|---|---|
| 1 | ಮರ್ಕರ ರಬ್ಬರ್ ಕಂಪೆನಿ | 1. ರಿ.ಅ ಸಂ.4706-10/2013<br>2. ರಿ.ಅ ಸಂ.44445/2013<br>3. ರಿ.ಅ ಸಂ.30151-53/2015<br>4. ಆರ್.ಎಫ್. ಸಂ.701/2015 |
| 2 | ನೀಲಂಬೂರು ರಬ್ಬರ್ ಕಂಪೆನಿ | 1. ರಿ.ಅ ಸಂ.41511-12/2015<br>2. ರಿ.ಅ ಸಂ.55037-38/2015 |

| | | |
|---|---|---|
| 3 | ಥಾಮ್ ಸನ್ ರಬ್ಬರ್ ಕಂಪೆನಿ | 1. ರಿ.ಅ ಸಂ.40364/2013<br>2. ರಿ.ಅ ಸಂ.55866/2015 |
| 4 | ಫ್ರೋರ್ಟ್ ಲ್ಯಾಂಡ್ ರಬ್ಬರ್ ಕಂಪೆನಿ | 1. ರಿ.ಅ ಸಂ.47317/2013<br>2. ರಿ.ಅ ಸಂ.55429-30/2015 |

ಗುತ್ತಿಗೆ ಪಡೆದುಕೊಂಡು ಬೆಳೆ ಬೆಳೆಯುತ್ತಿರುವ ಅರಣ್ಯ ಭೂಮಿಗಳ ಪಹಣಿ ಯಾವ ಗುತ್ತಿಗೆದಾರರ ಕಂಪನಿ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂಬುದರ ವಿವರಗಳನ್ನು ಲಗತ್ತಿಸಿದೆ.

ಅರಣ್ಯ ಭೂಮಿಯನ್ನು ಗುತ್ತಿಗೆದಾರರ ಹೆಸರಿಗೆ ವರ್ಗಾಯಿಸಲು ಕೈಜೋಡಿಸಿದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಂಡಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿ ಆಗಿರುವುದಿಲ್ಲ.

**ಸಂಖ್ಯೆ: ಎಫ್‌ಇಇ 86 ಎಫ್‌ಎಫ್‌ಎಲ್ 2024**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ
ಸಚಿವರು